ಶ್ರೀ ಅರಗ ಜ್ಞಾನೇಂದ್ರ :- ಇದಕ್ಕೆ ಸಂಬಂಧಪಟ್ಟ ಹಾಗೆ.

ಉಪಾಧ್ಯಕ್ಷರು :- ಸಂಬಂಧಪಡುವುದು ಎಂದರೆ ಅವರ ಹತ್ತಿರ ಮಾಹಿತಿ ಇಲ್ಲದಿದ್ದರೆ ಅವರು ಹೇಗೆ ಉತ್ತರ ಹೇಳುತ್ತಾರೆ?

ಶ್ರೀ ಅರಗ ಜ್ಞಾನೇಂದ್ರ :- ಉಪಾಧ್ಯಕ್ಷರೇ, ಇಡೀ ರಾಜ್ಯದ ದೇವಸ್ಥಾನಗಳ ಈ ಒಂದು ಪಟ್ಟಿಯನ್ನು ತರಿಸಿ ಎಲ್ಲವನ್ನೂ ಕೂಡ ಹಂತಹಂತವಾಗಿ ಜೀರ್ಣೋದ್ಧಾರ ಮಾಡತಕ್ಕಂತಹ ಒಂದು ವ್ಯವಸ್ಥೆ ಸರ್ಕಾರದ ಕಡೆಯಿಂದ ನಡೆಯುತ್ತದೆಯೇ? ಇದನ್ನು ನಿರ್ಮಾಣ ಮಾಡಬಹುದೇ ತಾವು.

ಉಪಾಧ್ಯಕ್ಷರು :- ವಿವರ ತರಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ.

ಶ್ರೀ ಆರ್. ಕೃಷ್ಣಪ್ಪ :- ಇದೇ ಉತ್ತರ ಅವರಿಗೂ ಅನ್ವಯಿಸುತ್ತದೆ. ಅವರಿಗೂ ಹೇಳಿದ್ದೇನೆ, ಈಗಲೂ ನಾನು ಸರಿ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಈಗ ಕೊಟ್ಟಂತಹ ವರದಿ ಇದೆಯಲ್ಲಾ

ಉಪಾಧ್ಯಕ್ಷರು :- ಸಾಕು ಈಗಾಗಲೇ ನಾಲ್ಕು ಜನ ಕೇಳಿದ್ದಾರೆ. ಅಶೋಕ್‌ಕಾಟ್ವೆ ತಾವು ಪ್ರಶ್ನೆ ಕೇಳಿ.

ವಿಷಯ :- ಹುಬ್ಬಳ್ಳಿ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 231 (1434)

ಶ್ರೀ ಅಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯ ಕೇಂದ್ರ ಬಸ್ ನಿಲ್ದಾಣ, ಹೊಸ ಬಸ್ ನಿಲ್ದಾಣ ಯಾವಾಗ ಪೂರ್ಣಗೊಳಿಸಲಾಗವುದು.

ಆ) ಇದರ ಪ್ರಗತಿ ಯಾವ ಹಂತದಲ್ಲಿದೆ. ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :-

ಅ) ಕಾಮಗಾರಿಯ ದಿನಾಂಕ 09-05-1996 ರಂದು ಪ್ರಾರಂಭಗೊಂಡಿದ್ದು, 18 ತಿಂಗಳೊಳಗಾಗಿ (ಮಳೆಗಾಲ ಸೇರಿಸಿ) ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಬಸ್ ನಿಲ್ದಾಣದ ನಿವೇಶನಗಳನ್ನು ಮಟ್ಟ ಮಾಡುವ ಕೆಲಸ ಹಾಗೂ ಮುಖ್ಯ ಆಡಿಪಾಯಕ್ಕಾಗಿ ಮಣ್ಣು ಅಗೆತದ ಕೆಲಸವು ಪ್ರಗತಿಯಲ್ಲಿರುತ್ತದೆ. ನಿವೇಶನವನ್ನು ಮಟ್ಟ ಮಾಡುವುದಕ್ಕಾಗಿ ರೂ. 3,50,750 ಗಳನ್ನು ಮೆ. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮದವರಿಗೆ ಪಾವತಿಸಲಾಗಿದೆ.

ಶ್ರೀ ಅಶೋಕ್ ಕಾಟ್ಟೆ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹದಿನೆಂಟು ತಿಂಗಳುಗಳಲ್ಲಿ ಸಂಪೂರ್ಣ ಕಾರ್ಯಗತಗೊಳಿಸಲಾಗುವುದೆಂದು ತಿಳಿಸಿದ್ದಾರೆ. ಇವೊತ್ತು ಮೂರೂವರೆ ಲಕ್ಷ ರೂಪಾಯಿಗಳಿಗೆ ಬರೀ ನೆಲವನ್ನು ಸಮತಟ್ಟು ಮಾಡುವುದಕ್ಕೆ ಮಾತ್ರ ಕೆಲಸ ತೆಗೆದುಕೊಂಡಿದ್ದು; ಬೇರೆ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು? ಮತ್ತು ಸಂಪೂರ್ಣವಾಗಿ ಟೆಂಡರ್ ಹಾಕಲು ಯಾವಾಗ ಟೆಂಡರ್ ಅರ್ಜಿಗಳನ್ನು ಕರೆಯಲಾಗುತ್ತದೆ? ಅಲ್ಲದೇ, ಹಿಂದೆ ಒಂದು ಕಂಪನಿಯವರು ಟೆಂಡರ್ ಕೊಟ್ಟಿದ್ದರು, ಅದರ ಬಗ್ಗೆ ಏನಾಯಿತು? ಎಂಬುದನ್ನು ತಿಳಿಸಬೇಕು.

ಶ್ರೀ ಪಿ. ಜೆ. ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿ ನಗರದಲ್ಲಿ ಸುಮಾರು 2 ಕೋಟಿ 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಉತ್ತಮ ಬಸ್ ನಿಲ್ದಾಣವನ್ನು ನಿರ್ಮಿಸಲು ಸ್ಥಳ ಗೊತ್ತುಪಡಿಸಿ ಕೆಲಸವನ್ನು ಹದಿನೆಂಟು ತಿಂಗಳೊಳಗೆ ಮಾಡಿ ಮುಗಿಸಬೇಕೆಂದು ದಿನಾಂಕ 9-5-96 ರಲ್ಲಿ ಗುತ್ತಿಗೆಯನ್ನು ಸಹ ನಿಗದಿಪಡಿಸಿದ್ದೇವೆ. ಬುಲ್ಡೋಜರ್ ಮೂಲಕ ನೆಲವನ್ನು ಸಮತಟ್ಟುಗೊಳಿಸುವ ಕೆಲಸಕ್ಕೆ ಈಗಾಗಲೇ 3,50,750 ಲಕ್ಷ ರೂಪಾಯಿಗಳನ್ನು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ರವರಿಗೆ ಕೊಟ್ಟಿದ್ದೇವೆ. ಮಳೆಗಾಲವೂ ಸೇರಿಸಿ 18 ತಿಂಗಳೊಳಗೆ ಕೆಲಸ ಮಾಡಬೇಕೆಂಬುದೇ ಸಾರಿಗೆ ಸಂಸ್ಥೆಯ ಉದ್ದೇಶವಾಗಿರುವುದಲ್ಲದೆ ಮತ್ತು ಇದು ಎರಡೂವರೆ ಕೋಟಿ ರೂಪಾಯಿಗಳ ಕೆಲಸವಾಗಿರುವುದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉದ್ದೇಶವಾಗಿರುವುದಲ್ಲದೆ, ಮತ್ತು ಇದು ಎರಡೂವರೆ ಕೋಟಿ ರೂಪಾಯಿಗಳ ಕೆಲಸವಾಗಿರುವುದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹಣಕಾಸಿನ ಮುಗ್ಗಟ್ಟಿನಲ್ಲಿದೆ. ವಿಳಂಬ ಮಾಡುವುದರಿಂದ ಕಾಸ್ಟ್ ಆಫ್ ಎಸ್ಕಲೇಶನ್ ಆಗುತ್ತದೆಂಬ ವಿಚಾರ ಕೂಡ ನನಗೆ ಗೊತ್ತಿರುವುದರಿಂದ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆದಷ್ಟು ಶೀಘ್ರವಾಗಿ ಬಸ್ ನಿಲ್ದಾಣವನ್ನು ಕಟ್ಟಿಕೊಡುವುದಕ್ಕೆ ಪ್ರಯತ್ನಪಡುತ್ತೇನೆ.

ವಿಷಯ :- ಸೂರತ್ಕಲ್ ಕ್ಷೇತ್ರದಲ್ಲಿ ಸರ್ಕಾರಿ ಜಮೀನು ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 231(1489)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?